## ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು ಕರ್ನಾಟಕ ಸರ್ಕಾರ, ಮತ್ತು ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿಯ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ 19ನೇ ಜೂನ್ 2023 ರಂದು ನಡೆದ ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 9ನೇ ಸಾಮಾನ್ಯ ಮಂಡಳಿ ಸಭೆಯ ನಡವಳಿಗಳು

*(ಭಾಗವಹಿಸಿದವರ ಪಟ್ಟಿಯನ್ನು ಲಗತ್ತಿಸಲಾಗಿದೆ)*

ಮುಖ್ಯ ಮೌಲ್ಯಮಾಪನಾಧಿಕಾರಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ ಇವರು ಸಾಮಾನ್ಯ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರನ್ನು ಸ್ವಾಗತಿಸಿದರು. ಕಾರ್ಯಸೂಚಿಯಲ್ಲಿರುವಂತೆ, ವಿಷಯಗಳನ್ನು ಪ್ರಸ್ತುತ ಪಡಿಸಲಾಯಿತು ಮತ್ತು ಕಾರ್ಯಸೂಚಿಗಳ ಪ್ರಕಾರ ಚರ್ಚೆಯನ್ನು ಕೈಗೊಳ್ಳಲಾಯಿತು. ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು: –

### ಕಾರ್ಯಸೂಚಿ -1

### 8ನೇ ಸಾಮಾನ್ಯ ಸಭೆಯ ನಡವಳಿಗಳ ದೃಢೀಕರಣ

*ತೀರ್ಮಾನ*

*ದಿನಾಂಕ:06-04-2022 ರಂದು ಜರುಗಿದ 8ನೇ ಸಾಮಾನ್ಯ ಮಂಡಳಿ ಸಭೆಯ ನಡವಳಿಗಳನ್ನು ಓದಿ ದೃಢೀಕರಿಸಲಾಯಿತು.*

### ಕಾರ್ಯಸೂಚಿ -2

### ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 8ನೇ ಸಾಮಾನ್ಯ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಮೇಲೆ ಕ್ರಮ ಕೈಗೊಂಡ ವರದಿ

*ತೀರ್ಮಾನ*

*ಸಾಮಾನ್ಯ ಮಂಡಳಿಯು ಕ್ರಮ ಕೈಗೊಂಡ ವರದಿಯನ್ನು ಪರಿಶೀಲಿಸಲಾಯಿತು ಮತ್ತು ಗಮನಿಸಲಾಯಿತು.*

### ಕಾರ್ಯಸೂಚಿ -3

### ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ಪ್ರಗತಿ ವರದಿ

*ತೀರ್ಮಾನ*

ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 2022-23ನೇ ಸಾಲಿನ ಆರ್ಥಿಕ ಮತ್ತು ಅಧ್ಯಯನಗಳ ಪ್ರಗತಿ ವರದಿಯನ್ನು ಗಮನಿಸಲಾಯಿತು.

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

## ಕಾರ್ಯಸೂಚಿ-4

## 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಮತ್ತು ಲೆಕ್ಕಪತ್ರಗಳು

*ತೀರ್ಮಾನ*

ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 2021-22ನೇ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಮತ್ತು ಸ್ವೀಕೃತಿಗಳು ಮತ್ತು ವೆಚ್ಚಗಳ ತ:ಖ್ತೆಯನ್ನು ಅನುಮೋದಿಸಲಾಯಿತು.

## ಕಾರ್ಯಸೂಚಿ-5

## 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ

*ತೀರ್ಮಾನ:*

ಪ್ರಾಧಿಕಾರದ ವಿವಿಧ ಸಭೆಗಳಲ್ಲಿ ಅನುಮೋದನೆಗೊಂಡು ಕೈಗೊಳ್ಳಲು ಬಾಕಿ ಇರುವ ಕೆಳಗಿನ ಅಧ್ಯಯನಗಳನ್ನು 2023-24ನೇ ಸಾಲಿನಲ್ಲಿ ಕೈಗೊಳ್ಳಲು ಅನುಮೋದಿಸಲಾಯಿತು.

**Grants requirement for the Studies proposed to be taken up in the year 2023-24**

| Sl.No | Name of the Scheme | Department | Grant Requirement (Rs. In lakhs) |
|---|---|---|---|
| 1. | Evaluation of impact of activities of Mahila Samakhya Karnataka | WCD | 5.00 |
| 2. | Impact Evaluation of following schemes:<br>a. Prabuddha-Financial Assistance to study abroad<br>b. Incentive for Inter-caste marriage<br>c. Interest subsidy scheme<br>d. Functional Utility of community halls for a region in general and community in particular<br>e. Evaluation of SCP/TSP schemes in promoting skilling and economic activity among youth with special focus to women entrepreneurship among SC/ST community<br>f. Promotional impact assessment of SCP/TSP schemes for SME units, Industrial shed and industrial sites for SC/ST entrepreneurs and Incentives for SC/ST start-ups<br>g. Impact Assessment of Various infrastructural facilities provided in SC/ST colonies by Kalyana Karnataka State, Malnad and Maidan development Boards and MLA LAD funds.<br>h. Evaluation of functioning and Impact of SCP/TSP schemes implemented by Major and Minor Irrigation Departments on beneficiaries and community (2014-15 to 2019-20) | Social Welfare | 100.00 |

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

| Grants requirement for the Studies proposed to be taken up in the year 2023-24 | | | |
|---|---|---|---|
| Sl.No | Name of the Scheme | Department | Grant Requirement (Rs. In lakhs) |
| 3. | Evaluation of schemes implemented by various SC/ST Development Corporation and their impact on socio economic status of the SC/ST community | Social Welfare | 30.00 |
| 4. | a. Evaluation of Infrastructure Works Completed by 4 Nigams.<br>b. Evaluation of Tank Filling Scheme of Water Resources Department<br>c. A Cost Benefit Analysis of Irrigation projects<br>d. Impact of Karnataka Integrated Urban Water Management Investment Programme-Jalasiri on provision of portable and clean drinking water to urban households and outcomes in terms of health and nutrition and living condition. | Water Resources | 100.00 |
| 5. | Study on strengthening of District Planning Committees in Compliance with Emerging Models in the Field | Planning Board | 5.00 |
| 6. | Comprehensive Evaluation of Pilgrimage / Dormitory Works Constructed by the Department of Tourism from 2016-17 to 2020-21 | Department of Tourism | 30.00 |
| 7. | Concurrent monitoring and Evaluation of Anila Bhagya Scheme and its impact on access to safe fuel and its sustainability in Karnataka | Food, Civil Supplies & Consumer Affairs | 40.00 |
| 8. | a. Evaluation of Functioning of Area Development Boards and their impact on infrastructure and Human development in the region, reduction in regional imbalances in Development.<br>b. Impact Assessment of works undertaken under KLLADS in Karnataka State | PPMS | 30.00 |
| 9. | a. Revamping MSMEs in Karnataka for promoting Growth and employment -strategy and Policy<br>b. Performance evaluation of Agro/Food Processing Units promoted under Agri Business Policy 2015<br>c. Functioning of KIADB/KSIIDC/KSSIDC | Industries & Commerce, Agro-Business Development Corporation & MSME | 75.00 |
| 10. | Evaluation of Urban Development Schemes for sustainable cities and communities. | UDD | 40.00 |
| 11. | Evaluation of functioning of Bio Energy Research Information and Demonstration Centres and the impact on achievement of SDG Goal-13 in terms of information and spread of biofuel activities, energy cost savings and energy security | Karnataka State Bio Energy Board | 5.00 |

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

| Grants requirement for the Studies proposed to be taken up in the year 2023-24 | | | |
|---|---|---|---|
| **Sl.No** | **Name of the Scheme** | **Department** | **Grant Requirement (Rs. In lakhs)** |
| 12. | Comparative Analysis of functioning of Government and Private Universities and educational institutions in Higher Education with focus on quality management and cost effectiveness | Higher Education | 30.00 |
| 13. | Evaluation of Literacy Programmes implemented by DSERT | Directorate of Public Education | 5.00 |
| 14. | Evaluation of Health for all -Ayushman Bharath Schemes and Evaluation of National Health Mission in achieving universal access to equitable, affordable and quality health care services in Karnataka (SDG-3) | Health and Family Welfare | 75.00 |
| 15. | a. Evaluation of Pradhan Mantri Krishi Sinchayi Yojana-Other Initiatives (PMKSY-OI)<br>b. Impact Evaluation of implementation of Agriculture Department schemes through Agriculture Universities in Karnataka state (2014-15 to 2019-20) | Watershed Development Department & Agriculture | 80.00 |
| 16. | Evaluation of Bhoo odethana scheme of Adi Jambhava Abhivrudhi Nigama | Adi Jambhava Abhivrudhi Nigama | 5.00 |
| 17. | Evaluation of Housing Schemes (Urban & Rural) | Housing Department | 25.00 |
| | **Total** | | **680.00** |

2022-23ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3451-00-092-0-05-115 (ಗುತ್ತಿಗೆ/ ಹೊರಗುತ್ತಿಗೆ) ರೂ.6,57,308/- ಗಳ ಹೆಚ್ಚುವರಿ ಅನುದಾನವನ್ನು ಲೆಕ್ಕ ಶೀರ್ಷಿಕೆ 3451-00-092-0-05-103 (ಸಾಮಾನ್ಯ) ರಿಂದ ವೇತನಗಳಿಗೆ ಭರಿಸಲಾಗಿರುವುದನ್ನು ಸಾಮಾನ್ಯ ಮಂಡಳಿಯಿಂದ ಅನುಮೋದಿಸಲಾಗಿದೆ.

2023-24ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 3451-00-092-0-05 (103)- ಸಹಾಯಾನುದಾನ-ಸಾಮಾನ್ಯ ಅಡಿಯಲ್ಲಿ ಒದಗಿಸಿರುವ ರೂ.250.00 ಲಕ್ಷಗಳು ಹಾಗೂ ಆರಂಭಿಕ ಮೊತ್ತ ರೂ.1620.36 ಲಕ್ಷಗಳು, ಒಟ್ಟು ರೂ.1870.36 ಲಕ್ಷಗಳು (ಮೌಲ್ಯಮಾಪನ ಕೈಗೊಳ್ಳಲು ಇಲಾಖೆಗಳಿಂದ ನೀಡಿರುವ ಮೊತ್ತ, ಯೋಜನಾ ಇಲಾಖೆಯಿಂದ ಗಣಕಯಂತ್ರ ಖರೀದಿಸಲು ನೀಡಿರುವ ಠೇವಣಿ ಸೇರಿದಂತೆ) ಅಧ್ಯಯನಗಳಿಗೆ ಸಂಬಂಧಿಸಿದ ವೆಚ್ಚ, ಸಮಾಲೋಚಕ ಸಂಸ್ಥೆಗಳಿಗೆ EMD ಮರುಪಾವತಿ ಹಾಗೂ ಇತರೆ ಕಛೇರಿ ವೆಚ್ಚಗಳಿಗೆ ಲಭ್ಯವಿರುತ್ತದೆ. ಲಭ್ಯವಿರುವ ಮೊತ್ತವನ್ನು ಈ ಕೆಳಗಿನಂತೆ ವಿನಿಯೋಗಿಸಲು ಅನುಮೋದಿಸಲಾಗಿದೆ.

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

| ವಿವರಗಳು | ಸಂಖ್ಯೆ | ಅವಶ್ಯವಿರುವ ಅನುದಾನ |
|---|---|---|
| ಪ್ರಗತಿಯಲ್ಲಿರುವ ಅಧ್ಯಯನಗಳಿಗೆ ಪಾವತಿಸಲು ಬಾಕಿ ಇರುವ ಮೊತ್ತ | 14 | ರೂ.513.61 ಲಕ್ಷಗಳು |
| ಹಿಂದಿನ ಸಭೆಗಳಲ್ಲಿ ಅನುಮೋದನೆಗೊಂಡು ಕೈಗೊಳ್ಳಲು ಬಾಕಿ ಇರುವ ಅಧ್ಯಯನಗಳು | 16 | ರೂ.680.00 ಲಕ್ಷಗಳು |
| ಹೊಸ ಅಧ್ಯಯನಗಳು (ಕಾರ್ಯಸೂಚಿ–9 ರಲ್ಲಿ ಅನುಮೋದಿಸಿರುವಂತೆ) | 7 | ರೂ.280.00 ಲಕ್ಷಗಳು |
| ಪ್ರಾಧಿಕಾರದ ಕಛೇರಿ ವೆಚ್ಚ, ಸಮಾಲೋಚಕ ಸಂಸ್ಥೆಗಳಿಗೆ EMD ಮರುಪಾವತಿ ಹಾಗೂ ಇತರೆ | | ರೂ.396.75 ಲಕ್ಷಗಳು |
| **ಒಟ್ಟು** | **37** | **ರೂ.1870.36 ಲಕ್ಷಗಳು** |

(ಕ್ರಮ: ಅಪರ ಮುಖ್ಯ ಮೌಲ್ಯಮಾಪನಾಧಿಕಾರಿಗಳು ಮತ್ತು ಆಡಳಿತಾಧಿಕಾರಿಗಳು)

**ಕಾರ್ಯಸೂಚಿ–6**

**ಪ್ರಾಧಿಕಾರದ ಆಡಳಿತ ಮಂಡಳಿ ಸಭೆಯ ವರದಿಗಳು**

*ತೀರ್ಮಾನ:*

ಸದಸ್ಯರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ 26 ಹಾಗೂ 27ನೇ ಆಡಳಿತ ಮಂಡಳಿಯ ವರದಿಗಳನ್ನು ಪರಿಶೀಲಿಸಿದರು ಮತ್ತು NITI ಆಯೋಗದ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ National Institute of Labour Economics and Research Development, ನವದೆಹಲಿ ಮತ್ತು ನವದೆಹಲಿ ಮೂಲದ ಮತ್ತೊಂದು ಸಂಸ್ಥೆಯಾದ M/s Sambodhi Research and Communications, ಈ ಸಂಸ್ಥೆಗಳು ಪ್ರಾಧಿಕಾರದೊಂದಿಗೆ ಜೊತೆ Empanel ಆಗಿರುವುದನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಪಿಡಿಎಸ್ 47 ಎಸ್‌ಪಿಬಿ 2021, ದಿನಾಂಕ:06–08–2022ರಂತೆ ರಾಜ್ಯ ಯೋಜನಾ ಮಂಡಳಿಯನ್ನು NITI ಆಯೋಗದ ಮಾದರಿಯಲ್ಲಿ ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆ(SITK)ಯಾಗಿ ಪುನರ್ ರಚಿಸಿದೆ. ಯೋಜನಾ ಇಲಾಖೆಯ ಅಸ್ತಿತ್ವದಲ್ಲಿರುವ ವಿಭಾಗಗಳಾದ ಜಿಲ್ಲಾ ಯೋಜನಾ ವಿಭಾಗ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ, ತಾಂತ್ರಿಕ ವಿಭಾಗ, ಗ್ರಂಥಾಲಯ ಮತ್ತು ಪ್ರಕಟಣೆ ಮತ್ತು ಆಡಳಿತ ವಿಭಾಗಗಳು SITK ಗೆ ಸಂಯೋಜಿಸಲಾಗಿದೆ. NITI ಆಯೋಗದ ಅಭಿವೃದ್ಧಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಚೇರಿ (DMEO) ಮಾದರಿಯಲ್ಲಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ (KEA) ವನ್ನು **ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ (KMEA)** ಎಂದು ಮರುನಾಮಕರಣ ಮಾಡಲಾಗಿದೆ.

ಸದಸ್ಯರು ಆಡಳಿತ ಮಂಡಳಿಯ ವರದಿಗಳನ್ನು ಅನುಮೋದಿಸಿದರು.

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

## ಕಾರ್ಯಸೂಚಿ-7

**CODR ಸಂಸ್ಥೆಯೊಂದಿಗಿನ ಒಡಂಬಡಿಕೆಯನ್ನು ರದ್ದುಗೊಳಿಸಿರುವ ಮತ್ತು ಸದರಿ ಅನುದಾನವನ್ನು ಮೌಲ್ಯಮಾಪನ ಪ್ರಾಧಿಕಾರದ ಅಧ್ಯಯನಗಳಿಗೆ ಉಪಯೋಗಿಸುವ ಬಗ್ಗೆ**

ಕಳೆದ ಎರಡು ವರ್ಷಗಳಲ್ಲಿ 2020-21 ಮತ್ತು 2021-22, ಒಡಂಬಡಿಕೆ (MOU) ಪ್ರಕಾರ, ಸಾರ್ವಜನಿಕ ವ್ಯವಹಾರಗಳ ಕೇಂದ್ರ (PAC) ಸಂಸ್ಥೆಯ ಮೂಲಕ ಮುಕ್ತ ದತ್ತಾಂಶ ಸಂಶೋಧನಾ ಕೇಂದ್ರ (CODR) ಸಂಸ್ಥೆಗೆ ವಹಿಸಲಾಗಿದ್ದ ಕಾರ್ಯಚಟುವಟಿಕೆಗಳಲ್ಲಿ ಮತ್ತು ಸಲ್ಲಿಸಿದ್ದ ವರದಿಗಳಲ್ಲಿ ಸಾಕಷ್ಟು ಕೊರತೆಗಳು ಹಾಗೂ ಲೋಪಗಳಿದ್ದು, ಗುಣಮಟ್ಟ ವಿಶ್ಲೇಷಣಾ ವರದಿಯನ್ನು ಸಲ್ಲಿಸದೇ ಇರುವುದು, ಸಮಯ ಮಿತಿ ಅನುಪಾಲನೆ ಇಲ್ಲದಿರುವುದು ಹಾಗೂ ಯೋಜನೆಯ ಆರ್ಥಿಕ ಹೊರೆ ಹೆಚ್ಚಾಗಿ ಕಂಡು ಬಂದಿದ್ದು, ಈ ಎಲ್ಲಾ ಕಾರಣದಿಂದ ಸದರಿ ಸಂಸ್ಥೆಗೆ ವಹಿಸಲಾಗಿದ್ದ ಜವಾಬ್ದಾರಿ ಪೂರ್ಣ ವಿಫಲವಾಗಿರುವುದರಿಂದ ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯೊಂದಿಗೆ ಮಾಡಿಕೊಂಡಿದ್ದ ಸಾರ್ವಜನಿಕ ವ್ಯವಹಾರಗಳ ಕೇಂದ್ರ (PAC) ಸಂಸ್ಥೆಯ ಒಡಂಬಡಿಕೆಯನ್ನು (MOU) ದಿನಾಂಕ:31.03.2023ರಿಂದ ಜಾರಿಗೆ ಬರುವಂತೆ ಮುಕ್ತಾಯಗೊಳಿಸಲಾಗಿದೆ ಹಾಗೂ ಸರ್ಕಾರದಿಂದ ಈವರೆಗೆ ಬಿಡುಗಡೆಯಾದ ಅನುದಾನದಲ್ಲಿ ಹೆಚ್ಚುವರಿಯಾಗಿ ಬಿಡುಗಡೆಯಾದ ಅನುದಾನ ಒಟ್ಟು ರೂ.1.78 ಕೋಟಿ ಹಣವನ್ನು ಸರ್ಕಾರಕ್ಕೆ ಹಿಂದಿರುಗಿಸಲು ತಿಳಿಸಿ ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್ 12 ಎಸ್‌ಎಸ್‌ಎಂ 2020, ದಿನಾಂಕ.28.02.2023 ಅನ್ನು ಹೊರಡಿಸಿದೆ.

*ತೀರ್ಮಾನ:*

ಸಭೆಯಲ್ಲಿ ಹಾಜರಿದ್ದ PAC ಸಂಸ್ಥೆಯ ಪ್ರತಿನಿಧಿಗಳು, ಒಡಂಬಡಿಕೆಯಂತೆ 2022-23ನೇ ಸಾಲಿನಲ್ಲಿ ಸಿಬ್ಬಂದಿಗಳಿಗೆ ಸಂಬಳ/ಭತ್ಯೆಗಳನ್ನು ನೀಡಲು ರೂ.1.84 ಕೋಟಿಗಳನ್ನು ಸರ್ಕಾರದಿಂದ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಆರ್ಥಿಕ ಇಲಾಖೆಯಿಂದ CODR ಸಂಸ್ಥೆಗೆ ಪಾವತಿಸಲು ಒದಗಿಸಿರುವ ರೂ.5.41 ಕೋಟಿಗಳನ್ನು ಪ್ರಾಧಿಕಾರದ ಅಧ್ಯಯನಗಳಿಗೆ ಹಾಗೂ ಪ್ರಾಧಿಕಾರದ ಇತರೆ ವೆಚ್ಚಗಳಿಗೆ ಉಪಯೋಗಿಸಲು ಸಾಮಾನ್ಯ ಮಂಡಳಿಯಿಂದ ಅನುಮೋದಿಸಲಾಗಿದೆ.

PAC ಸಂಸ್ಥೆಯು ರೂ.1.84 ಕೋಟಿಗಳನ್ನು ಕೋರುತ್ತಿರುವ ಸಂದರ್ಭದಲ್ಲಿ ಆರ್ಥಿಕ ಇಲಾಖೆಗೆ ಕಡತ ಸಲ್ಲಿಸಿ ಮತ್ತೊಮ್ಮೆ ಅಭಿಪ್ರಾಯ ಪಡೆಯಲು ತಿಳಿಸಲಾಯಿತು.

(ಕ್ರಮ: ಆಡಳಿತಾಧಿಕಾರಿಗಳು)

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

## ಕಾರ್ಯಸೂಚಿ-8

**ಮೌಲ್ಯಮಾಪನ ವರದಿಗಳು ಹಾಗೂ ಶಿಫಾರಸ್ಸುಗಳ ಮೇಲೆ ಇಲಾಖೆಗಳಿಂದ ಕ್ರಮ ಕೈಗೊಂಡ ವರದಿಗಳು**

*ತೀರ್ಮಾನ:*

ಪ್ರಾಧಿಕಾರದಿಂದ ಕೈಗೊಂಡ ಅಧ್ಯಯನಗಳಲ್ಲಿನ ಶೋಧನೆ ಮತ್ತು ಶಿಫಾರಸ್ಸುಗಳಿಗೆ ಅನೇಕ ಇಲಾಖೆಗಳಿಂದ ಪ್ರಶಂಸಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಸದಸ್ಯರು, ಮೌಲ್ಯಮಾಪನ ಅಧ್ಯಯನಗಳಲ್ಲಿನ ಶಿಫಾರಸ್ಸುಗಳನ್ನು ಪರಿಶೀಲಿಸಿದರು ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಕ್ರಮ ಕೈಗೊಂಡ ವರದಿಗಳು ಬಾಕಿ ಇರುವ ಅಧ್ಯಯನಗಳ ಕುರಿತು ಚರ್ಚಿಸಿ, ಸಭೆಯಲ್ಲಿ ಹಾಜರಿದ್ದ ಇಲಾಖೆಯ ಪ್ರತಿನಿಧಿಗಳಿಗೆ ಕೂಡಲೇ ವರದಿಗಳನ್ನು ಸಲ್ಲಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಈ ಸಂಬಂಧ ಪ್ರಾಧಿಕಾರದಿಂದ ಅಗತ್ಯ ಅನುಸರಣಾ ಕ್ರಮ ಕೈಗೊಳ್ಳುವಂತೆ ತಿಳಿಸಲಾಯಿತು.

(ಕ್ರಮ: ಆಯಾ ಅಧ್ಯಯನಗಳಿಗೆ ಸಂಬಂಧಿಸಿದ ಅಧಿಕಾರಿಗಳು)

## ಕಾರ್ಯಸೂಚಿ-9

**ಹೊಸ ಮೌಲ್ಯಮಾಪನ ಅಧ್ಯಯನಗಳು**

*ತೀರ್ಮಾನ*

2023–24ನೇ ಸಾಲಿನಲ್ಲಿ ಈ ಕೆಳಗಿನ ಹೊಸ ಅಧ್ಯಯನಗಳನ್ನು ಕೈಗೊಳ್ಳಲು ಅನುಮೋದಿಸಲಾಗಿದೆ.

| ಕ್ರ.ಸಂ. | ಅಧ್ಯಯನದ ಹೆಸರು | ಇಲಾಖೆ |
|---|---|---|
| 1 | ವಿವಿಧ ಇಲಾಖೆಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಆರ್ಥಿಕ ನಿರ್ವಹಣೆಯಲ್ಲಿ ರಾಜ್ಯ ಮಟ್ಟದ ಬ್ಯಾಂಕರ್ ಸಮಿತಿಯ ಪಾತ್ರ ಹಾಗೂ ಜವಾಬ್ದಾರಿ ಕುರಿತು ಮೌಲ್ಯಮಾಪನ ಅಧ್ಯಯನ | ಆರ್ಥಿಕ ಇಲಾಖೆ |
| 2 | ವಿಕಲಚೇತನರ ಕಲ್ಯಾಣಕ್ಕಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಪರಿಣಾಮದ ಮೌಲ್ಯಮಾಪನ | ಮಹಿಳಾ & ಮಕ್ಕಳ ಅಭಿವೃದ್ಧಿ, ವಿಕಲಚೇತನರ & ಹಿರಿಯ ನಾಗರೀಕರ ಸಬಲೀಕರಣ ಇಲಾಖೆ |
| 3 | ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯದಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಪಿಂಚಣಿ ಯೋಜನೆಗಳ ಪರಿಣಾಮದ ಮೌಲ್ಯಮಾಪನ | ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ |
| 4 | ರೈತರ ಕಲ್ಯಾಣಕ್ಕಾಗಿ ರೈತ ಸಂಪರ್ಕ ಕೇಂದ್ರಗಳ ಪರಿಣಾಮದ ಮೌಲ್ಯಮಾಪನ | ಕೃಷಿ ಇಲಾಖೆ |
| 5 | ಜನ ವಿಕಾಸ ಯೋಜನೆಯ ಪರಿಣಾಮದ ಮೌಲ್ಯಮಾಪನ | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ |
| 6 | Implementation of 'New Textile and Garment Policy 2019-24' | ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ |
| 7 | 2022–23ನೇ ಸಾಲಿನಲ್ಲಿ ಇಲಾಖೆಯಿಂದ ಅನುಷ್ಠಾನಗೊಳಿಸಿರುವ ವಿವಾಹ ಕಾರ್ಯಕ್ರಮಗಳ ಸಮೀಕ್ಷೆ | ಸಮಾಜ ಕಲ್ಯಾಣ ಇಲಾಖೆ |

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಕ್ರ.ಸಂ. 7ರಲ್ಲಿನ ಅಧ್ಯಯನವನ್ನು ಈಗಾಗಲೇ ಕೈಗೊಳ್ಳುತ್ತಿರುವ ಉದ್ದೇಶಿಸಿರುವ ಸಮಾಜ ಕಲ್ಯಾಣ ಇಲಾಖೆಯ ಅಧ್ಯಯನಗಳೊಂದಿಗೆ ಸೇರಿಸಲು ಸೂಚಿಸಲಾಯಿತು.

(ಕ್ರಮ: ಅಪರ ಮುಖ್ಯ ಮೌಲ್ಯಮಾಪನಾಧಿಕಾರಿಗಳು)

## ಕಾರ್ಯಸೂಚಿ-10

## ಅಧ್ಯಕ್ಷರ ಅನುಮತಿಯೊಂದಿಗೆ ಇತರೆ ವಿಷಯಗಳು

1. ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿ (Governing Body), ಸಾಮಾನ್ಯ ಮಂಡಳಿ (General Body), ತಾಂತ್ರಿಕ ಸಮಿತಿ (Technical Committee), Tender Evaluation Committee, Empanelment Committee ಗಳಿಗೆ ಸಮಿತಿ ಸದಸ್ಯರು ಮತ್ತು ವಿಷಯ ತಜ್ಞರನ್ನು ಆಹ್ವಾನಿಸಲಾಗುತ್ತಿದೆ. ಹಾಗೇಯೆ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಯವರಿಗೆ ಸಂಪನ್ಮೂಲ ವ್ಯಕ್ತಿಯವರಿಂದ ತರಬೇತಿ ಆಯೋಜಿಸಿದಾಗಲೂ ಸಹ ಸಮಿತಿ ಸದಸ್ಯರಲ್ಲಿ ಕೆಲವರು ಮತ್ತು ಸಂಪನ್ಮೂಲ ವ್ಯಕ್ತಿಯವರಿಗೆ ಹಿಂದಿನ ಸಭಾ ತೀರ್ಮಾನದಂತೆ ಸಭಾ ಭತ್ಯೆ ರೂ.3000 ಅರ್ಧ ದಿನಕ್ಕೆ ಹಾಗೂ ರೂ.5000 ಒಂದು ದಿನಕ್ಕೆ ನೀಡಲಾಗುತ್ತಿದೆ. ನೀಡಬಹುದಾದ ಸಾರಿಗೆ ಭತ್ಯೆ ಕುರಿತು ತೀರ್ಮಾನ ಕೋರಿದೆ.

   *ತೀರ್ಮಾನ:*

   ಪ್ರಾಧಿಕಾರದ ಸಾಮಾನ್ಯ ಮಂಡಳಿ (General Body), ಆಡಳಿತ ಮಂಡಳಿ (Governing Body), ತಾಂತ್ರಿಕ ಸಮಿತಿ (Technical Committee), Tender Evaluation Committee, Empanelment Committee ಹಾಗೂ ಇನ್ನಿತರೆ ಸಭೆಗಳಿಗೆ ಹಾಜರಾಗುವ ಅಧಿಕಾರೇತರ/ನಾಮನಿರ್ದೇಶಿತ ಸದಸ್ಯರು ಮತ್ತು ವಿಷಯ ತಜ್ಞರುಗಳಿಗೆ ಪ್ರಸ್ತುತ ನೀಡುತ್ತಿರುವ ಸಭಾ ಭತ್ಯೆ (ರೂ.3000 ಅರ್ಧ ದಿನಕ್ಕೆ ಹಾಗೂ ರೂ.5000 ಒಂದು ದಿನಕ್ಕೆ) ಯೊಂದಿಗೆ ನಿಯಮಾನುಸಾರ (ಕೆ.ಸಿ.ಎಸ್.ಆರ್. ನಿಯಮ/ಆರ್ಥಿಕ ಇಲಾಖೆಯ ಇತ್ತೀಚಿನ ಆದೇಶದಂತೆ ಗ್ರೂಪ್ 'ಎ' ಅಧಿಕಾರಿಗಳಿಗೆ ನಿಗದಿ ಪಡಿಸಿರುವ ಸಾರಿಗೆ ಭತ್ಯೆ ಅಥವಾ ವಾಸ್ತವವಾಗಿ ಆಗಿರುವ ವೆಚ್ಚ (ರೂ.2000ಗಳಿಗೆ ಮಿತಿಗೊಳಿಸಿ, ಯಾವುದು ಕಡಿಮೆ ಇದೆಯೋ) ಸಾರಿಗೆ ಭತ್ಯೆಯನ್ನು ನೀಡಲು ಅನುಮೋದನೆ ನೀಡಲಾಯಿತು.

   (ಕ್ರಮ: ಆಡಳಿತಾಧಿಕಾರಿಗಳು)

2. ಸಾಮಾನ್ಯ ಮಂಡಳಿ (General Body), ಆಡಳಿತ ಮಂಡಳಿ (Governing Body), ತಾಂತ್ರಿಕ ಸಮಿತಿ (Technical Committee), ಇತ್ಯಾದಿ ಸಭೆಗಳಿಗೆ ಈಗಾಗಲೇ ನೇಮಕವಾಗಿರುವ ವಿಷಯ

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

2. ಸಾಮಾನ್ಯ ಮಂಡಳಿ (General Body), ಆಡಳಿತ ಮಂಡಳಿ (Governing Body), ತಾಂತ್ರಿಕ ಸಮಿತಿ (Technical Committee), ಇತ್ಯಾದಿ ಸಭೆಗಳಿಗೆ ಈಗಾಗಲೇ ನೇಮಕವಾಗಿರುವ ವಿಷಯ ತಜ್ಞರು / ಸಮಿತಿ ಸದಸ್ಯರು ಸಭೆಗಳಿಗೆ ಗೈರುಹಾಜರಾಗುತ್ತಿದ್ದು, ಅಂತಹ ವಿಷಯ ತಜ್ಞರ / ಸಮಿತಿ ಸದಸ್ಯರ ನೇಮಕಾತಿಯನ್ನು ಒಂದು ಸಾಮಾನ್ಯ ಮಂಡಳಿ ಸಭೆಗೆ ಗೈರು ಹಾಜರಾದರೆ, ಎರಡು ಆಡಳಿತ ಮಂಡಳಿ ಸಭೆಗೆ ಗೈರು ಹಾಜರಾದರೆ ಮತ್ತು ಎರಡು ತಾಂತ್ರಿಕ ಸಭೆಗೆ ಗೈರು ಹಾಜರಾದರೆ ಅನರ್ಹಗೊಳಿಸಬಹುದಾಗಿದೆ. ಆದೇಶ ಕೋರಿದೆ.

*ತೀರ್ಮಾನ:*

ಪ್ರಾಧಿಕಾರದ ವಿವಿಧ ಸಮಿತಿಗಳ ಸದಸ್ಯರು, ಒಂದು ಸಾಮಾನ್ಯ ಮಂಡಳಿ ಸಭೆ, ಎರಡು ಆಡಳಿತ ಮಂಡಳಿ ಸಭೆ, ಎರಡು ತಾಂತ್ರಿಕ ಸಭೆಗೆ ಮತ್ತು ಇನ್ನಿತರೆ ಸಮಿತಿ ಸಭೆಗಳಿಗೆ ನಿರಂತರವಾಗಿ ಗೈರು ಹಾಜರಾದರೆ ಅಂತಹ ಸದಸ್ಯರ ನೇಮಕಾತಿಯನ್ನು ಅನರ್ಹಗೊಳಿಸಿ, ಬೇರೆ ಅರ್ಹ ಸದಸ್ಯರನ್ನು ನೇಮಿಸಲು ಸಾಮಾನ್ಯ ಮಂಡಳಿಯ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು.

ಕೆಳಕಾಣಿಸಿದ ವಿಷಯ ತಜ್ಞರನ್ನು ಪ್ರಾಧಿಕಾರದ ತಾಂತ್ರಿಕ ಸಮಿತಿ ಸದಸ್ಯರನ್ನಾಗಿ ಅನುಮೋದಿಸಲಾಯಿತು.

| ಕ್ರ.ಸಂ. | ಸದಸ್ಯರ ಹೆಸರು/ವಿವರ |
|---|---|
| 1. | ಪ್ರೊ.ಆರ್. ಇಂದಿರಾ, Honorary President, Alumni Association, Dept. of Sociology, University of Mysore, |
| 2. | ಡಾ. ಅನಿತ ಕುರೂಪ್, DEAN, NIAS, ಬೆಂಗಳೂರು |
| 3. | ಡಾ. ನಿರಂಜನ್ ಆರಾಧ್ಯ, National Law School of India University-Bengaluru, |
| 4. | ಡಾ.ಟಿ. ನರೇಂದ್ರಪ್ಪ, ಕೃಷಿ ತಜ್ಞರು, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು |

(ಕ್ರಮ: ಆಡಳಿತಾಧಿಕಾರಿಗಳು)

3. ದಿನಾಂಕ:10-04-2017 ರಂದು ನಡೆದ ಪ್ರಾಧಿಕಾರದ ನಾಲ್ಕನೇ ಸಾಮಾನ್ಯ ಸಭೆಯ ತೀರ್ಮಾನದಂತೆ ನಾಮನಿರ್ದೇಶನಗೊಂಡ ಸದಸ್ಯರ (External Expert) ಕಾರ್ಯಾವಧಿ 2+2 ವರ್ಷವಿದ್ದು, ಕಾಲಾವಧಿ ಮುಕ್ತಾಯಗೊಂಡಿರುವ ಸದಸ್ಯರ ಬದಲಿಗೆ ಅರ್ಹ ಸದಸ್ಯರ ನಾಮ ನಿರ್ದೇಶನಕ್ಕಾಗಿ ಆದೇಶ ಕೋರಿದೆ.

*ತೀರ್ಮಾನ:*

ಕಾಲಾವಧಿ ಮುಕ್ತಾಯಗೊಂಡಿರುವ ಸದಸ್ಯರ ಬದಲಿಗೆ ಅರ್ಹ ಸದಸ್ಯರನ್ನು ನಿಯಮಾನುಸಾರ ನಾಮ ನಿರ್ದೇಶನ ಮಾಡಲು ಆಡಳಿತ ಮಂಡಳಿಯ ಅಧ್ಯಕ್ಷರಿಗೆ ಅಧಿಕಾರ ನೀಡಲಾಯಿತು.

(ಕ್ರಮ: ಆಡಳಿತಾಧಿಕಾರಿಗಳು)

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

4. ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದಲ್ಲಿ ಸೃಜನೆಯಾಗಿರುವ ಲೆಕ್ಕಪತ್ರ ಅಧಿಕಾರಿ ಹುದ್ದೆಗೆ KIPA ಸಂಸ್ಥೆಯ ಮೂಲಕ ನಿವೃತ್ತ ಅಧಿಕಾರಿಯವರ ಸೇವೆಯನ್ನು ಪಡೆಯಲಾಗುತ್ತಿದ್ದು, ಬದಲಿಗೆ ರಾಜ್ಯ ಲೆಕ್ಕಪತ್ರ ಇಲಾಖೆಯ ಸಹಾಯಕ ನಿರ್ದೇಶಕರ ಅಥವಾ ಅಧೀಕ್ಷಕರ ವೃಂದದ ಅಧಿಕಾರಿಗಳ ಸೇವೆಯನ್ನು ನಿಯೋಜನೆ ಮೇಲೆ ಪಡೆಯಬಹುದಾಗಿದೆ. ಆದೇಶ ಕೋರಿದೆ.

*ತೀರ್ಮಾನ:*

ಪ್ರಾಧಿಕಾರದ ಲೆಕ್ಕಾಧಿಕಾರಿ ಹುದ್ದೆಗೆ ರಾಜ್ಯ ಲೆಕ್ಕ ಪತ್ರ ಇಲಾಖೆಯ ಸಹಾಯಕ ನಿರ್ದೇಶಕರು ಅಥವಾ ಅಧೀಕ್ಷಕ ವೃಂದದ ಅಧಿಕಾರಿಯನ್ನು ನಿಯೋಜನೆ ಮೇಲೆ ಪಡೆಯಲು ಅನುಮೋದಿಸಲಾಯಿತು.

(ಕ್ರಮ: ಆಡಳಿತಾಧಿಕಾರಿಗಳು)

5. ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ವೃಂದ ನೇಮಕಾತಿಯಲ್ಲಿ ವಾಹನ ಚಾಲಕರ 2 ಹುದ್ದೆಗಳು ಸೃಜನೆಯಾಗಿದ್ದು, 1 ವಾಹನ ಮಾತ್ರ ಇರುವುದರಿಂದ ಸದರಿ ಹುದ್ದೆಯನ್ನು ರದ್ದುಪಡಿಸಿ ಬೇರೆ ಹುದ್ದೆಯನ್ನು ಪಡೆಯಬಹುದಾಗಿದೆ (ಸರ್ಕಾರವು ಇರುವ ಒಂದು ವಾಹನದ ಜೊತೆಗೆ ಇನ್ನೊಂದು ವಾಹನ ನೀಡಿದಲ್ಲಿ ಸದರಿ ವಾಹನಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕರನ್ನು ನೇಮಿಸಿಕೊಳ್ಳುವುದು ಸೇರಿದಂತೆ) ಹಾಗೆಯೇ ಕಛೇರಿ ಸಹಾಯಕರ 5 ಮಂಜೂರಾದ ಹುದ್ದೆಗಳನ್ನು ಬದಲಾಯಿಸಿ ಕಂಪ್ಯೂಟರ್ ಆಪರೇಟರ್ ಕಂ ಕಛೇರಿ ಸಹಾಯಕರೆಂದು ಪರಿಗಣಿಸಬಹುದಾಗಿದೆ. ಆದೇಶ ಕೋರಿದೆ.

*ತೀರ್ಮಾನ:*

ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ವೃಂದ ನೇಮಕಾತಿ ಕುರಿತಂತೆ ಸರ್ಕಾರದ ಆದೇಶ ಸಂಖ್ಯೆ: ಪಿಡಿ 36 ಪಿಎಸ್‌ಡಿ 2019, ದಿನಾಂಕ:04-07-2019 ರಲ್ಲಿ ಮಂಜೂರಾದ ಹುದ್ದೆಗಳನ್ನು ಈ ಕೆಳಗಿನಂತೆ ಪರಿಷ್ಕರಿಸಿ ನೇಮಕಾತಿ ಮಾಡಲು ಮತ್ತು ಪ್ರಸ್ತುತ ಇರುವ ಒಂದು ವಾಹನದ ಜೊತೆಗೆ ಸರ್ಕಾರದಿಂದ ಇನ್ನೊಂದು ವಾಹನ ನೀಡಿದಲ್ಲಿ ಸದರಿ ವಾಹನಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕರನ್ನು ನೇಮಿಸಿಕೊಳ್ಳಲು ಸಾಮಾನ್ಯ ಮಂಡಳಿಯಿಂದ ಅನುಮೋದಿಸಲಾಯಿತು.

<table>
<tr><th>ಕ್ರ.ಸಂ.</th><th>ಹುದ್ದೆ</th><th>ಮಂಜೂರಾದ ಹುದ್ದೆಗಳ ಸಂಖ್ಯೆ</th><th>ಪ್ರಸ್ತಾಪಿಸಿರುವ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಕಛೇರಿ ಸಹಾಯಕರು</td><td>5</td><td rowspan="2">7 ಕಛೇರಿ ಸಹಾಯಕರು ಕಂ ಕಂಪ್ಯೂಟರ್ ಆಪರೇಟರ್</td></tr>
<tr><td>2</td><td>ಕಂಪ್ಯೂಟರ್ ಆಪರೇಟರ್</td><td>1</td></tr>
<tr><td>3</td><td>ವಾಹನ ಚಾಲಕರು</td><td>2</td><td>1</td></tr>
<tr><td colspan="2">ಒಟ್ಟು</td><td>**8**</td><td>**8**</td></tr>
</table>

(ಕ್ರಮ: ಆಡಳಿತಾಧಿಕಾರಿಗಳು)

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

6. ಅಧ್ಯಯನಗಳ ಪ್ರಗತಿಯನ್ನಾಧರಿಸಿ ಹಂತವಾರು ಅನುದಾನವನ್ನು ಶೇಕಡಾ 10:30:50:10 ರೀತಿಯಲ್ಲಿ ಬಿಡುಗಡೆ ಮಾಡುತ್ತಿದ್ದು, ಅಂತಿಮ ವರದಿಗಳನ್ನು ಸಲ್ಲಿಸುವಲ್ಲಿ ಸಮಾಲೋಚಕ ಸಂಸ್ಥೆಗಳಿಂದ ವಿಳಂಬವಾಗುತ್ತಿದ್ದರೂ, ಕೊನೆಯ ಕಂತಿನ ಅನುದಾನದಲ್ಲಿ ದಂಡದ ಮೊತ್ತ/ಭಾಷಾಂತರ ಮೊತ್ತವನ್ನು ಕಡಿತಗೊಳಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ, ಇದನ್ನು ಬದಲಾಯಿಸಿ ಶೇಕಡಾ 10:20:40:30 ರೀತಿಯಲ್ಲಿ ಬಿಡುಗಡೆ ಮಾಡಲು (ಇದರಿಂದ ಕನ್ನಡ ಭಾಷೆಯ ಆವೃತ್ತಿ ಬೇಗ ಸ್ವೀಕೃತವಾಗುತ್ತದೆ) ಅನುಮತಿಸಬಹುದಾಗಿದೆ. ಆದೇಶ ಕೋರಿದೆ.

*ತೀರ್ಮಾನ:*

ಪ್ರಾಧಿಕಾರದಿಂದ ಇನ್ನು ಮುಂದೆ ಕೈಗೊಳ್ಳುವ ಹೊಸ ಅಧ್ಯಯನಗಳಿಗೆ ಸಮಾಲೋಚಕ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುವಾಗ ಪ್ರಸ್ತುತ ಇರುವ ಹಂತವಾರು ಕಂತುಗಳ ಶೇಕಡಾ 10:30:50:10 ಅನ್ನು ಬದಲಾಯಿಸಿ ಶೇಕಡಾ 10:20:40:30 ರೀತಿಯಲ್ಲಿ ಬಿಡುಗಡೆ ಮಾಡಲು ಸಾಮಾನ್ಯ ಮಂಡಳಿಯು ಅನುಮೋದಿಸಿತು.

(ಕ್ರಮ: ಆಡಳಿತಾಧಿಕಾರಿಗಳು)

7. ಮೌಲ್ಯಮಾಪನ ಅಧ್ಯಯನಗಳಿಗೆ ಸಮಾಲೋಚಕ ಸಂಸ್ಥೆಗಳಿಗೆ ನೀಡಬೇಕಾಗಿರುವ ಅನುದಾನವನ್ನು ಒಡಂಬಡಿಕೆಯಂತೆ ಹಂತವಾರು ಬಿಡುಗಡೆ ಮಾಡುತ್ತಿರುವ ಹಿನ್ನೆಲೆಯಲ್ಲಿ, ಮೊದಲನೇ ಮತ್ತು ಎರಡನೇ ಕಂತಿನ ಅನುದಾನ ಬಿಡುಗಡೆ ಮಾತ್ರ ಬ್ಯಾಂಕ್ ಗ್ಯಾರಂಟಿಯನ್ನು ಕಡ್ಡಾಯಗೊಳಿಸಿರುವುದರಿಂದ, ಈ ಹಂತದಲ್ಲಿ ಅಧ್ಯಯನದ ಕಾರ್ಯ ಭಾಗಶಃ ಪೂರ್ಣಗೊಂಡಿದ್ದರೂ, ಆರ್ಥಿಕ ಪ್ರಗತಿ ಸಾಧಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ, ಅನುದಾನಕ್ಕೆ ತಕ್ಕಂತೆ ಬ್ಯಾಂಕ್ ಗ್ಯಾರಂಟಿಯನ್ನು ಕನಿಷ್ಠ 3 ಹಂತಗಳವರೆವಿಗೆ ಪಡೆಯಲು ಕಡ್ಡಾಯಗೊಳಿಸಲು ಕೋರಿದೆ.

*ತೀರ್ಮಾನ:*

ಮೌಲ್ಯಮಾಪನ ಅಧ್ಯಯನಗಳಿಗೆ ಸಮಾಲೋಚಕ ಸಂಸ್ಥೆಗಳಿಗೆ ಒಡಂಬಡಿಕೆಯಂತೆ ನಿಗದಿಯಾಗಿರುವ ಪೂರ್ಣ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ಪ್ರಾರಂಭದಲ್ಲೇ ನೀಡುವುದನ್ನು ಕಡ್ಡಾಯಗೊಳಿಸಲು ಸಾಮಾನ್ಯ ಮಂಡಳಿಯು ಅನುಮೋದಿಸಿತು.

(ಕ್ರಮ: ಆಡಳಿತಾಧಿಕಾರಿಗಳು)

8. ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ Organogram ಸ್ವಲ್ಪ ಮಟ್ಟಿನ ಬದಲಾವಣೆಯೊಂದಿಗೆ ಅನುಮೋದನೆ ಕೋರಿದೆ.

*ತೀರ್ಮಾನ:*

ಸಾಮಾನ್ಯ ಮಂಡಳಿಯಿಂದ, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ Organogram ಲಗತ್ತಿಸಿರುವ ಅನುಬಂಧದಲ್ಲಿರುವಂತೆ ಪರಿಷ್ಕರಿಸಿ ಅನುಮೋದಿಸಲಾಯಿತು.

(ಕ್ರಮ: ಆಡಳಿತಾಧಿಕಾರಿಗಳು)

ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

9. ಪ್ರಾಧಿಕಾರದಿಂದ ಕೈಗೊಳ್ಳುವ ಅಧ್ಯಯನಗಳಿಗೆ ಅಗತ್ಯವಿರುವ ದತ್ತಾಂಶ/ಮಾಹಿತಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಲು ಸಾಕಷ್ಟು ವಿಳಂಬವಾಗುತ್ತಿದ್ದು, ಈ ಕಾರಣದಿಂದ ಉದ್ದೇಶಿಸಿರುವ ಅಧ್ಯಯನವನ್ನು ಸಕಾಲದಲ್ಲಿ ಪ್ರಾರಂಭಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ, ಯೋಜನಾ ಇಲಾಖೆಯ ಅವಲೋಕನ ತಂತ್ರಾಂಶದಲ್ಲಿ ಆರ್ಥಿಕ ಪ್ರಗತಿಯೊಂದಿಗೆ ಭೌತಿಕ ಪ್ರಗತಿಯನ್ನೂ ಸಹ ಅಳವಡಿಸಲು ಎಲ್ಲಾ ಇಲಾಖೆಗಳಿಗೆ ಕಡ್ಡಾಯಗೊಳಿಸಬೇಕಾಗಿರುತ್ತದೆ. ಪ್ರಾಧಿಕಾರದಿಂದ ಅಗತ್ಯ ಮಾಹಿತಿ/ದತ್ತಾಂಶದ ಕುರಿತು ಸಂಬಂಧಪಟ್ಟ ಇಲಾಖೆಗೆ ಪತ್ರ ರವಾನಿಸಿದ 30 ದಿನಗಳೊಳಗೆ ಮಾಹಿತಿ ಸಲ್ಲಿಸಲು ಕಾಲಾವಕಾಶ ನೀಡಬಹುದಾಗಿದೆ. ತದನಂತರವೂ ಮಾಹಿತಿ ಸ್ವೀಕೃತವಾಗದೇ ಇದ್ದಲ್ಲಿ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತರಲು ಅನುಮೋದಿಸಲಾಯಿತು.

(ಕ್ರಮ: ಆಯಾ ಅಧ್ಯಯನವಾರು ಅಧಿಕಾರಿಗಳು)

10. ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿಗೆ ಪ್ರಸ್ತುತ ಇರುವ ಸದಸ್ಯರೊಂದಿಗೆ **ಇನ್ನಿತರೆ ಪ್ರಮುಖ ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳನ್ನು** ಸದಸ್ಯರನ್ನಾಗಿ ಸೇರ್ಪಡೆಗೊಳಿಸಲು ಸೂಚಿಸಲಾಯಿತು.

(ಕ್ರಮ: ಆಡಳಿತಾಧಿಕಾರಿಗಳು)


ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಡಾ. ಇ.ವಿ.ರಮಣ ರೆಡ್ಡಿ, ಐ.ಎ.ಎಸ್.,)**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು,
ಕರ್ನಾಟಕ ಸರ್ಕಾರ ಮತ್ತು ಅಧ್ಯಕ್ಷರು, ಕರ್ನಾಟಕ ಮೇಲ್ವಿಚಾರಣೆ ಮತ್ತು
ಮೌಲ್ಯಮಾಪನ ಪ್ರಾಧಿಕಾರದ ಸಾಮಾನ್ಯ ಮಂಡಳಿ

# Annexure

# ORGANIZATION CHART OF KARNATAKA MONITORING AND EVALUATION AUTHORITY




ಮುಖ್ಯ ಮೌಲ್ಯಮಾಪನಾಧಿಕಾರಿ
ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ:**

1. ಡಾ.ಇ. ವಿ. ರಮಣ ರೆಡ್ಡಿ, ಭಾ.ಆ.ಸೇ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಹಾಗೂ ಕೆಎಂಇಎಯ ಸಾಮಾನ್ಯ ಮಂಡಳಿಯ ಅಧ್ಯಕ್ಷರು
2. ಡಾ. ಶಾಲಿನಿ ರಜನೀಶ್, ಭಾ.ಆ.ಸೇ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಆಡಳಿತ ಮಂಡಳಿಯ ಅಧ್ಯಕ್ಷರು, ಕರ್ನಾಟಕ ಮೇಲ್ವಿಚಾರಣೆ ಮೌಲ್ಯಮಾಪನ ಪ್ರಾಧಿಕಾರ
3. ಡಾ. ರಿಚರ್ಡ್ ವಿನ್ಸೆಂಟ್ ಡಿಸೋಜ, ಭಾ.ಆ.ಸೇ. ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
4. ಶ್ರೀ. ಚಂದ್ರಶೇಖರ್, ಅಪರ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
5. ಶ್ರೀ. ಮೋಹನ್ ರಾಜ್, ಕಾರ್ಯದರ್ಶಿಗಳು ತೋಟಗಾರಿಕೆ ಇಲಾಖೆ
6. ಶ್ರೀ. ಮಲ್ಲಿಕಾರ್ಜುನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇ-ಆಡಳಿತ
7. ಶ್ರೀ. ವೆಂಕಟೇಶ್, ಉಪ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ
8. ಶ್ರಿ.ಹೊನ್ನರಾಜು, ಉಪ ನಿರ್ದೇಶಕರು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ
9. ವಿದ್ಯಾ ಎಚ್, ಸರ್ಕಾರದ ಅಧೀನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ವಿಧಾನಸೌಧ
10. ಗಾಯಿತ್ರಿ ಜಿ ನ್, ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
11. ಎಸ್. ಎಸ್. ಅಯ್ಯರ್, ಸೀನಿಯರ್ ಫೆಲೋ, ಸಾರ್ವಜನಿಕ ವ್ಯವಹಾರಗಳ ಕೇಂದ್ರ (PAC) ಮುಕ್ತ ಮಾಹಿತಿ ಸಂಶೋಧನಾ ಕೇಂದ್ರ (CODR).
12. ಅಶ್ವಿನಿ ವಿ, ಮುಖ್ಯಸ್ಥರು (ಆಡಳಿತ), ಸಾರ್ವಜನಿಕ ವ್ಯವಹಾರಗಳ ಕೇಂದ್ರ (PAC) ಮುಕ್ತ ಮಾಹಿತಿ ಸಂಶೋಧನಾ ಕೇಂದ್ರ (CODR).
13. ಡಾ.ನಾರಾಯಣ, ನಿರ್ದೇಶಕರು, ಫಿಸ್ಕಲ್ ಪಾಲಿಸಿ ಇನ್ಸ್ಟಿಟ್ಯೂಟ್, ಬೆಂಗಳೂರು.
14. ನಿರ್ದೇಶಕರು ಸಾರ್ವಜನಿಕ ವ್ಯವಹಾರಗಳ ಕೇಂದ್ರ (PAC) ಮುಕ್ತ ಮಾಹಿತಿ ಸಂಶೋಧನಾ ಕೇಂದ್ರ (CODR)
15. ಡಾ.ಸೈಯದ ನೂರ್ ಫಾತೀಮಾ, ಅಪರ ಮುಖ್ಯ ಮೌಲ್ಯಮಾಪನಾಧಿಕಾರಿ, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
16. ಶ್ರೀ. ಟಿ ಶಶಿಧರ್, ಆಡಳಿತಾಧಿಕಾರಿಗಳು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
17. ಶ್ರೀಮತಿ. ಸವಿತಾ ದಯಾನಂದ, ಸಹ ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
18. ಶ್ರೀ.ಎಸ್.ಆರ್.ಎಸ್. ನಾಥನ್, ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
19. ಶಾಜಿಯಾ ನಾಝ್, ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
20. ಶ್ರೀಮತಿ. ಅಮೃತವಲ್ಲಿ ಡಿ ಎಸ್, ಸಹ ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ
21. ಶ್ರೀಮತಿ. ಪಾವನಿ, ಸಹ ನಿರ್ದೇಶಕರು, ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರ